# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಮಾನ್ಯ ಸದಸ್ಯರ ಹೆಸರು | : **ಶ್ರೀ ಎಂ. ನಾಗರಾಜು** |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : **186** |
| ಉತ್ತರಿಸ ಬೇಕಾದ ದಿನಾಂಕ | : 05.03.2025 |
| ಉತ್ತರಿಸ ಬೇಕಾದ ಸಚಿವರು | : ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬಡವರಿಗೆ, ದುರ್ಬಲ ವರ್ಗದವರಿಗೆ ಮತ್ತು ಕಡಿಮೆ ಆದಾಯ ಕುಟುಂಬಗಳಿಗೆ ಅಗ್ಗದ ದರಗಳಲ್ಲಿ ಯೋಗ್ಯವಾದ ವಾಸಸ್ಥಳ ನೀಡಲು ಇಲಾಖೆ ವತಿಯಿಂದ ಕಳೆದ 3 ವರ್ಷಗಳಲ್ಲಿ ಎಷ್ಟು ನಿವೇಶನ/ಮನೆ ಹಂಚಿಕೆ ಮಾಡಲಾಗಿದೆ; | ರಾಜ್ಯದಲ್ಲಿ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ಅರ್ಹ ಕುಟುಂಬಗಳಿಗೆ ವಸತಿ/ನಿವೇಶನ ಒದಗಿಸಲು ಸರ್ಕಾರದಿಂದ ವಿವಿಧ ವಸತಿ/ನಿವೇಶನ ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಅರ್ಹ ನಿವೇಶನರಹಿತರಿಗೆ ನಿವೇಶನ ಹಂಚಿಕೆ ಮಾಡಲು ಮುಖ್ಯಮಂತ್ರಿಗಳ ಗ್ರಾಮೀಣ ಮತ್ತು ನಗರ ನಿವೇಶನ ಯೋಜನೆಗಳು ಜಾರಿಯಲ್ಲಿರುತ್ತವೆ. ಸದರಿ ಯೋಜನೆಗಳಡಿ ನಿರ್ದಿಷ್ಟ ಮಾನದಂಡಗಳೊಂದಿಗೆ ಉಚಿತ ನಿವೇಶನ ಹಂಚಿಕೆ ಮಾಡಲಾಗುತ್ತಿದ್ದು, ಅಗ್ಗದ ದರದಲ್ಲಿ ನಿವೇಶನ ಹಂಚಿಕೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.<br><br>**ನಿವೇಶನ ಹಂಚಿಕೆಗೆ ನಿಗಧಿಪಡಿಸಲಾದ ಮಾನದಂಡಗಳು:**<br><br>ಫಲಾನುಭವಿಯು ಸಂಬಂಧಪಟ್ಟ ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿ ವಾಸವಾಗಿರಬೇಕು.<br>ವಾರ್ಷಿಕ ಆದಾಯ ಗ್ರಾಮೀಣ ಪ್ರದೇಶದಲ್ಲಿ ರೂ.1,20,000/-ಗಳು ಮತ್ತು ನಗರ ಪ್ರದೇಶದಲ್ಲಿ ರೂ.2,00,000/-ಗಳ ಮಿತಿಗಿಂತ ಕಡಿಮೆ ಇರಬೇಕು.<br>ನಿವೇಶನ ಹಕ್ಕುಪತ್ರವನ್ನು ಮಹಿಳೆಯರ ಹೆಸರಿನಲ್ಲಿ ಮಾತ್ರ ವಿತರಿಸಲಾಗುವುದು. (ಅಂಗವಿಕಲರು, ವಿಧುರರು, ಮಾಜಿ ಸೈನಿಕರು ಮತ್ತು ಹಿರಿಯ ನಾಗರೀಕರನ್ನು ಹೊರತುಪಡಿಸಿ)<br>ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ನಿವೇಶನ/ವಸತಿ ಸೌಲಭ್ಯ ಪಡೆದಿರಬಾರದು.<br>ನಿಯಮಾನುಸಾರ ಪರಿಶಿಷ್ಟ ಜಾತಿ/ಪಂಗಡದವರಿಗೆ ಶೇ.24.10 ಮೀಸಲಾತಿ ಇರುತ್ತದೆ.<br>ಮಾಜಿ ಯೋಧರು/ಅವರ ವಿಧವೆಯರು ಆಗಿದ್ದಲ್ಲಿ ನಿವೇಶನ ಹಂಚಿಕೆಯಲ್ಲಿ ಶೇ.1 ರಷ್ಟು ಮತ್ತು ಅಂಗವಿಕಲರಿಗೆ ಶೇ.5 ರಷ್ಟು ಮೀಸಲಾತಿಯನ್ನು ಒದಗಿಸಲಾಗುವುದು.<br><br>2022-2023 ರಿಂದ 2024-2025 ಫೆಬ್ರವರಿ-2025ರ |

ಅಂತ್ಯಕ್ಕೆ ಜಿಲ್ಲಾಧಿಕಾರಿಗಳ ಪ್ರಸ್ತಾವನೆಯನ್ನಾಧರಿಸಿ ರಾಜ್ಯಾದ್ಯಂತ ಒಟ್ಟು 24217 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ವಿವರ ಈ ಕೆಳಕಂಡಂತಿದೆ.

| ವರ್ಷ | ಗ್ರಾಮೀಣ | ನಗರ | ಒಟ್ಟು |
|---|---|---|---|
| 2022-2023 | 10110 | 11058 | 21168 |
| 2023-2024 | 1236 | 960 | 2196 |
| 2024-2025 | 483 | 370 | 853 |
| **ಒಟ್ಟು** | **11829** | **12388** | **24217** |

**ಮನೆಗಳ ಹಂಚಿಕೆ ವಿವರಗಳು:**

2022-23ನೇ ಸಾಲಿನಿಂದ 2024-25ನೇ ಸಾಲಿನ ಜನವರಿ-2025ರ ಅಂತ್ಯಕ್ಕೆ ವಿವಿಧ ವಸತಿ ಯೋಜನೆಗಳಡಿ ಹಿಂದಿನ ಶ್ರೇಣಿಗಳಲ್ಲಿ ನೀಡಲಾದ ಮನೆಗಳ ಪೈಕಿ ಪ್ರಗತಿಯಲ್ಲಿರುವ ಮನೆಗಳನ್ನು ಒಳಗೊಂಡಂತೆ ಒಟ್ಟು 5,50,543 ಮನೆಗಳನ್ನು ಪೂರ್ಣಗೊಳಿಸಿ ಹಂಚಿಕೆ ಮಾಡಲಾಗಿದೆ. ವರ್ಷವಾರು ವಿವರ ಇಂತಿದೆ:

| ವರ್ಷ | ಪೂರ್ಣಗೊಳಿಸಿ ಹಂಚಿಕೆ ಮಾಡಲಾದ ಮನೆಗಳು |
|---|---|
| 2022-2023 | 188375 |
| 2023-2024 | 212647 |
| 2024-2025 | 149521 |
| ಒಟ್ಟು | 550543 |

| | | |
|---|---|---|
| ಆ) | ಕೆಲವೊಂದು ಅಧ್ಯಯನಗಳ ಪ್ರಕಾರ ಇವತ್ತಿಗೂ ರಾಜ್ಯದ ನಾಗರೀಕರಿಗೆ 85 ಲಕ್ಷ ನಿವೇಶನಗಳ ಕೊರತೆ ಇರುವುದು ನಿಜವೇ; ಇದ್ದಲ್ಲಿ, ಈ ಕೊರತೆಯನ್ನು ನೀಗಿಸಲು ಯಾವ ರೀತಿಯ ಕ್ರಮಗಳನ್ನು ಕೈಗೊಂಡಿದೆ ಮತ್ತು 2024-25ರಲ್ಲಿ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯಾದ್ಯಂತ 2018 ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ವಸತಿ/ ನಿವೇಶನರಹಿತರ ಸಮೀಕ್ಷೆ ಹಾಗೂ 2017 ಮತ್ತು 2018 ರಲ್ಲಿ ನಗರ ಪ್ರದೇಶಲ್ಲಿ ಬೇಡಿಕೆ ಸಮೀಕ್ಷೆ, ಕೈಗೊಂಡಿದ್ದು, ಸದರಿ ಸಮೀಕ್ಷೆ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ 7,25,430 ಮತ್ತು ನಗರ ಪ್ರದೇಶದಲ್ಲಿ 1027657 ನಿವೇಶನರಹಿತರು ಕಂಡು ಬಂದಿರುತ್ತಾರೆ.<br><br>ನಿವೇಶನ ಹಂಚಿಕೆ ಮಾಡಲು ಸರ್ಕಾರಿ ಜಮೀನಿಗೆ ಪ್ರಥಮ ಆದ್ಯತೆ ನೀಡಲಾಗಿದ್ದು, ಸ್ಥಳೀಯವಾಗಿ ಲಭ್ಯವಿರುವ ಸೂಕ್ತ ಸರ್ಕಾರಿ ಜಮೀನನ್ನು ಜಿಲ್ಲಾಧಿಕಾರಿಗಳಿಂದ ಮಂಜೂರು ಮಾಡಿಸಿಕೊಂಡು ನಿವೇಶನ ಹಂಚಿಕೆಗೆ ಬಳಸಿಕೊಳ್ಳಬಹುದಾಗಿದೆ. ಒಂದು ವೇಳೆ ಸರ್ಕಾರಿ ಜಮೀನು ಲಭ್ಯವಿಲ್ಲದ ಕಡೆಗಳಲ್ಲಿ ಮಾತ್ರ ವಸತಿಗೆ ಸೂಕ್ತ ಖಾಸಗಿ |

| | | |
|---|---|---|
| | | ಜಮೀನನ್ನು ಖರೀದಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಜಮೀನು ಖರೀದಿ ಸಮಿತಿ ಮೂಲಕ ಕ್ರಮವಹಿಸಲಾಗುತ್ತಿದೆ.<br><br>ಜಿಲ್ಲಾಧಿಕಾರಿಗಳು ಸಲ್ಲಿಸುವ ಪ್ರಸ್ತಾವನೆಯನ್ನಾಧರಿಸಿ ನಿಗಮದಿಂದ ಹಕ್ಕುಪತ್ರಗಳನ್ನು ನೀಡಲಾಗುತ್ತಿದ್ದು, 2024-2025ನೇ ಆರ್ಥಿಕ ವರ್ಷದಲ್ಲಿ (ಫೆಬ್ರವರಿ-2025 ರ ಅಂತ್ಯಕ್ಕೆ) ಗ್ರಾಮೀಣ ಮತ್ತು ನಗರ ನಿವೇಶನ ಯೋಜನೆಗಳಡಿ ಒಟ್ಟು 853 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ (**ಜಿಲ್ಲಾವಾರು ವಿವರ ಅನುಬಂಧ-1ರಲ್ಲಿ ಒದಗಿಸಲಾಗಿದೆ).**<br><br>ರಾಜ್ಯಾದ್ಯಂತ ನಿವೇಶನ ಹಂಚಿಕೆಗೆ ಗ್ರಾಮೀಣ ಪ್ರದೇಶದಲ್ಲಿ 1552.82 ಮತ್ತು ನಗರ ಪ್ರದೇಶದಲ್ಲಿ 1169.06 ಒಟ್ಟು 2721.87 ಎಕರೆ ಸರ್ಕಾರಿ ಜಮೀನನ್ನು ಕಾಯ್ದಿರಿಸಲಾಗಿದ್ದು, ಜಮೀನಿನ ಲಭ್ಯತೆ ಹಾಗೂ ಅರ್ಹ ನಿವೇಶನರಹಿತರ ಸಂಖ್ಯೆಗೆ ಅನುಗುಣವಾಗಿ ಹಂತ-ಹಂತವಾಗಿ ನಿವೇಶನ ವಿತರಿಸಲು ಕ್ರಮವಹಿಸಲಾಗುತ್ತಿದ್ದು, ನಿವೇಶನ ಹಂಚಿಕೆಗೆ ಯಾವುದೇ ಕಾಲಮಿತಿ ಇರುವುದಿಲ್ಲ (ಲಭ್ಯವಿರುವ **ಜಿಲ್ಲಾವಾರು ವಿವರ ಅನುಬಂಧ-2ರಲ್ಲಿ ಒದಗಿಸಲಾಗಿದೆ**). |

ಸಂಖ್ಯೆ: ವಇ 53 ಹೆಚ್‌ಎಂ 2025

**(ಬಿ.ಜೆಡ್. ಜಮೀರ್ ಅಹ್ಮದ್‌ಖಾನ್)**

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ

ಕಲ್ಯಾಣ ಸಚಿವರು

ಅನುಬಂಧ - 1

## LCQ - 186

| Sl. No. | District | RURAL | URBAN | Total |
|---|---|---|---|---|
| 1 | Bagalkot | 52 | 0 | 52 |
| 2 | Bengaluru Urban | 109 | 0 | 109 |
| 3 | Chikkaballapura | 23 | 0 | 23 |
| 4 | Chikkamagaluru | 59 | 0 | 59 |
| 5 | Chitradurga | 31 | 0 | 31 |
| 6 | DakshinaKannada | 25 | 0 | 25 |
| 7 | Davanagere | 0 | 156 | 156 |
| 8 | Dharwad | 0 | 87 | 87 |
| 9 | Gadag | 1 | 1 | 2 |
| 10 | Hassan | 25 | 0 | 25 |
| 11 | Haveri | 2 | 0 | 2 |
| 12 | Kolar | 16 | 0 | 16 |
| 13 | Koppal | 0 | 92 | 92 |
| 14 | Ramanagara | 132 | 0 | 132 |
| 15 | Shivamogga | 3 | 0 | 3 |
| 16 | Tumakuru | 5 | 0 | 5 |
| 17 | Vijayanagar | 0 | 34 | 34 |
| | **Grand Total** | **483** | **370** | **853** |

*** End of February 2025**

**LCQ - 186** **ಅನುಬಂಧ - 2**

## ರಾಜ್ಯಾದ್ಯಂತ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಲಭ್ಯವಿರುವ ಸರ್ಕಾರಿ ಜಮೀನಿನ ವಿವರ

| ಕ್ರ ಸಂ | ಜಿಲ್ಲೆ | ಗ್ರಾಮೀಣ | ನಗರ | ಒಟ್ಟು |
|---|---|---|---|---|
| 1 | Bagalkot | 25.90 | 8.53 | 34.43 |
| 2 | Ballari | 24.73 | 265.10 | 289.83 |
| 3 | Belagavi | 7.00 | 40.00 | 47.00 |
| 4 | BengaluruRural | 156.11 | 33.50 | 189.61 |
| 5 | BengaluruUrban | 20.80 | 2.05 | 22.85 |
| 6 | Bidar | 75.55 | 16.06 | 91.61 |
| 7 | Chamarajanagar | 20.30 | 14.69 | 34.99 |
| 8 | Chikkaballapur | 212.22 | 127.06 | 339.28 |
| 9 | Chikkamagaluru | 89.33 | 18.95 | 108.28 |
| 10 | Chitradurga | 101.19 | 16.05 | 117.24 |
| 11 | DakshinaKannada | 96.01 | 19.92 | 115.93 |
| 12 | Davanagere | 9.70 | 19.29 | 28.99 |
| 13 | Dharwad | 3.55 | 119.54 | 123.09 |
| 14 | Gadag | 1.15 | 4.00 | 5.15 |
| 15 | Hassan | 102.91 | 64.79 | 167.70 |
| 16 | Haveri | 186.91 | 11.68 | 198.59 |
| 17 | Kalaburagi | 3.60 | 0.00 | 3.60 |
| 18 | Kodagu | 10.25 | 7.61 | 17.86 |
| 19 | Kolar | 38.49 | 35.73 | 74.22 |
| 20 | Koppal | 4.75 | 0.00 | 4.75 |
| 21 | Mandya | 72.95 | 8.00 | 80.95 |
| 22 | Mysuru | 24.06 | 23.79 | 47.85 |
| 23 | Raichur | 9.45 | 42.30 | 51.75 |
| 24 | Ramanagara | 10.00 | 0.00 | 10.00 |
| 25 | Shivamogga | 67.68 | 31.00 | 98.68 |
| 26 | Tumakuru | 109.23 | 184.72 | 293.95 |
| 27 | Udupi | 46.92 | 1.12 | 48.04 |
| 28 | UttaraKannada | 0.00 | 10.00 | 10.00 |
| 29 | Vijayanagara | 15.11 | 2.38 | 17.49 |
| 30 | Vijayapura | 1.35 | 26.23 | 27.58 |
| 31 | Yadgiri | 5.63 | 15.00 | 20.63 |
| **Total** | | **1552.82** | **1169.06** | **2721.87** |